**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.</u>**

**ಓ.ಎಸ್. 162/2023**

ಸಾಕ್ಷಿಯನ್ನು ದಿಃ **14.11.2025** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**<u>ಮುಂದುವರಿದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರಃಶ್ರೀ. YG ವಕೀಲರಿಂದ:</u>**

ನನ್ನ ತಾತನಿಗೆ ಕಪನಯ್ಯ, ಬಸಪ್ಪ ಮತ್ತು ನಂಜಪ್ಪ ಎಂಬ ಮೂರು ಜನ ಮಕ್ಕಳುಎಂದು ವಾದ ಪತ್ರದಲ್ಲಿ ಬರೆಸಿದ್ದೇನೆ. ಬಸಪ್ಪ ಹುಟ್ಟಿನಿಂದ ಅಂಗವಿಕಲರು ಎಂದರೆ ಸರಿ. ಅವರು ಬದುಕಿದ್ದಾಗ ಅವರ ಯೋಗಕ್ಷೇಮವನ್ನು ಒಟ್ಟು ಕುಟುಂಬದಲ್ಲಿದ್ದ ನಾವೆಲ್ಲರೂ ನೋಡಿಕೊಳ್ಳುತ್ತಿದ್ದೆವು. ಬಸಪ್ಪರವರು ಮನೆಗೆ ಹಿರಿ ಮಗ ಎಂದರೆ ಸರಿಯಲ್ಲ. ಕಪನಯ್ಯರವರು ಬಸಪ್ಪರವರ ತಮ್ಮ ಎಂದರೆ ಸರಿಯಲ್ಲ. ಮೃತ್ಯು ಪತ್ರದಲ್ಲಿ ಕಪನಯ್ಯರವರು ಬಸಪ್ಪರವರ ತಮ್ಮ ಎಂದು ಬರೆದಿದೆ ಎಂದರೆ ಸುಳ್ಳು ಬರೆದಿದೆ. ಬಸಪ್ಪರವರು ತಮಗೆ ಬಂದ ಭಾಗದ ಜಮೀನನ್ನು ವಿಲ್ ಮೂಲಕ ಕಪನಯ್ಯರವರಿಗೆ ಕೊಟ್ಟಿದ್ದಾರೆ ಎಂದರೆ ಭಾಗ ಆಗಿಲ್ಲ. ಬಸಪ್ಪರವರು ಬದುಕಿದ್ದಾಗ ಅವರ ಎಲ್ಲಾ ಆಗು-ಹೋಗುಗಳನ್ನು ಕಪನಯ್ಯರವರೇ ನೋಡಿಕೊಳ್ಳುತಿದ್ದ ಕಾರಣ ಬಸಪ್ಪರವರು ತಮ್ಮ ಎಲ್ಲಾ ಆಸ್ತಿಯನ್ನು ಕಪನಯ್ಯರವರಿಗೆ ವಿಲ್ ಮೂಲಕ ಬರೆದಿದ್ದಾರೆ ಎಂದರೆ ಸರಿಯಲ್ಲ. ಎಲ್ಲರೂ ಒಟ್ಟು ಕುಟುಂಬದಲ್ಲಿದ್ದೆವು. ಅಸಲು ದಾವಾ ಸಂಃ 247/2020ರಲ್ಲಿ ನಾನು 3ನೇ ಪ್ರತಿವಾದಿ ಎಂದರೆ ಸರಿ. ಅದನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದಾರೆ. ಸದರಿ ದಾವೆಯನ್ನುನನ್ನ ತಂದೆ ನೋಡಿಕೊಳ್ಳುತ್ತಿರುವ ಕಾರಣ ಈ ದಾವೆಯನ್ನು ಕೂಡ ಅವರೇ ನಡೆಸಬಹುದಾಗಿತ್ತು ಎಂದರೆ ಅವರಿಗೆ ಆರೋಗ್ಯ ಸರಿ ಇಲ್ಲ. ನನ್ನ ತಂದೆಗೆ ಆರೋಗ್ಯ ಸರಿ ಇಲ್ಲ ಎಂದುತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ನನ್ನ ತಂದೆ ಆರೋಗ್ಯವಾಗಿದ್ದು, ಮೇಲೆ ಹೇಳಿದ ದಾವೆಯನ್ನು ನಡೆಸುತ್ತಿದ್ದರೂ ಸಹ ಈ ದಾವೆಯಲ್ಲಿ ಹಾಜರಾಗಿ ಸಾಕ್ಷಿ ನುಡಿದರೆ ನಿಜಾಂಶ ಗೊತ್ತಾಗುತ್ತದೆ ಎಂದು ನಾನು ಅವರಿಂದ GPA ಪಡೆದುಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಖರೀದಿಸಿದ ದಾವಾ ಐಟಂ ನಂ.2ರಲ್ಲಿ 1 ಎಕರೆ 1 ಗುಂಟೆಯನ್ನು ಕಬಳಿಸಬೇಕು ಎಂದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಖರೀದಿಸಿದ ಜಮೀನಿನ ಚಕ್ಕುಬಂದಿ ಬೇರೆ ಇದೆ ಎಂದರೆ ಸರಿ. ಅದರ ಚಕ್ಕುಬಂಧಿ

ಪೂರ್ವಕ್ಕೆ ರಸ್ತೆ ಎಂದರೆ ಸರಿ. ಪಶ್ಚಿಮಕ್ಕೆ R.B ಪುಟ್ಟಣ್ಣಯ್ಯ ಮತ್ತು ಬಸವಯ್ಯರವರ ಜಮೀನು ಎಂದರೆ ಸರಿ. ಉತ್ತರ ಮತ್ತು ದಕ್ಷಿಣಕ್ಕೆ 1ನೇ ಪ್ರತಿವಾದಿಯ ಜಮೀನು ಎಂದರೆ ಸರಿಯಲ್ಲ, ನಮ್ಮ ಮತ್ತು 1ನೇ ಪ್ರತಿವಾದಿಯ ಜಮೀನು. 1ನೇ ಪ್ರತಿವಾದಿ ಖರೀದಿಸಿದ ಜಮೀನಿನ ಸರ್ವೇ ನಂಬರ್ ಈಗ 41/4 ಎಂದರೆ ಸರಿ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಕೂಡ 1ನೇ ಪ್ರತಿವಾದಿಗೆ ಸೇರಿದ 1 ಎಕರೆ 1 ಗುಂಟೆಯನ್ನು ಕಬಳಿಸಬೇಕು ಎಂದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.